# ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.

## ಸಿ.ಸಿ. ನಂಃ 1095/2023

ಚಾ.ಸಾ :7

ಪ್ರಾ.ಸಾ :6

ಸಾಕ್ಷಿದಾರರ ಹೆಸರು : ಗಿರೀಶ್ ಕುಮಾರ್

ತಂದೆಯ ಹೆಸರು : ಕುಂಞಾ ನಾಯ್ಕ ,

ಪ್ರಾಯ : 47 ವರ್ಷ

ಉದ್ಯೋಗ : ಚಾಲಕ,

ವಾಸಸ್ಥಾನ : ಕೈಕಾರ.

ಪ್ರಮಾಣ ವಚನ ಭೋದಿಸಿದ ದಿನಾಂಕ : **09-07-2026**

( ಕಲಂ 299Cr.P.C. ಯಡಿ ವಿಚಾರಣೆ:)

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಈಗ ನೋಡುತ್ತಿರುವ ದಾಖಲೆಗಳು ಆಗಿದ್ದು ದಿ: **26-12-2014** ರ ಸ್ವತ್ತು ಸ್ವಾಧೀನತಾ ಮಹಜರು ಮತ್ತು ತಕ್ಷಿರು ಸ್ಥಳದ ಮಹಜರು ಆಗಿದ್ದು ಆ ಮಹಜರುಗಳಿಗೆ **12** ವರುಷಗಳ ಹಿಂದೆ ಸಂಪ್ಯ ಠಾಣೆಯಲ್ಲಿ ಮಾಡಿರುತ್ತೆನೆ. ಸಾಕ್ಷಿ ಆ ದಾಖಲೆಗಳಲ್ಲಿನ ತಮ್ಮ ಸಹಿ ನೋಡಿ ಗುರಿತಿಸಿದ್ದು ಸ್ವತ್ತು ಸ್ವಾಧೀನತಾ ಮಹಜರನ್ನು ಈಗಾಗಲೇ ನಿಪಿ.**3** ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.**3**(ಎ) ಎಂದು , ಮಹಜರನ್ ಜೇರಾಕ್ಸ್ ಪ್ರತಿಯನ್ನು ನಿ.ಪಿ.**4** ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.**4**(ಎ) ಎಂದು ಗುರುತಿಸಲಾಯಿತು. ಸದರಿ ಮಹಜರಿನಲ್ಲಿ ಏನೆಲ್ಲ ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಬೈಕುನ್ನು ಪೊಲೀಸರು ಆರೋಪಿಯಿಂದ ವಶಪಡಿಸಿಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಸ.ಸ.ಅ. ರವ**ರಿಂದಃ**

ದಿ**: 26-12-14** ರಂದು ಬೆಃ **10** ಗಂಟೆಗೆ ಆರ್ಯಾಪು ಗ್ರಾಮ ಕರ್ಪಾಡಿ ಎಂಬಲ್ಲಿ ಆರೋಪಿ ಮಹಮದ ಮಸ್ತಫ್ ರವರು ಬೈಕನ್ನು ಚಲಾಯಿಸಿಕೊಂಡು ಬರುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ ಆದರೆ ಅಲ್ಲಿ ಮೋಟಾರ್ ಸೈಕಲ್ ಇತ್ತು ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಆರೋಪಿಯನ್ನು **11-00** ಗಂಟೆಗೆ ಠಾಣೆಗೆ ಕರೆತಂದು ವಿಚಾರಿಸಿದಾಗ ಅವನು **2** ಮತ್ತು **3** ನೇ ಆರೋಪಿಯೊಂಗೆ ಸೇರಿಕೊಂಡು ಇದೇ ಮೋಟಾರ್ ಸೈಕಲನಲ್ಲಿ ಚಾಸಾ**-1** ರವರ ಕುತ್ತಿಗೆಯಲ್ಲಿದ್ದ ಚಿನ್ನದ ಚೈನನ್ನು ಎಳೆದುಕೊಂಡು ಬೊವಿಕಾನಕ್ಕೆ ಹೋಗಿದ್ದು ಅಲ್ಲಿ ಅತ್ತು ಅಲಿಯಾಸ ಅಜರುದ್ದಿನ ಸದರಿ ಸರವನ್ನು ಮಾರಾಟ ಮಾಡಿ ರೂ **500-10** ಹಣವನ್ನು ಒಂದನೇ ಆರೋಪಿಗೆ ನೀಡಿದ್ದು, ಸದರಿ ಹಣವನ್ನು ಖರ್ಚು ಮಾಡಿರುತ್ತೇನೆ. ಸದರಿ ತಕ್ಷಿರಿಗೆ ಬಳಿಸಿದ ಮೋಟಾರ್ ಸೈಕಲ ಕೆಎಲ್**-14-**ಎಂ**-9826** ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬೈಕನ್ನು ಪೋಲಿಸರು ಮಹಜರ ಮುಖೇನ ವಶಪಡಿಸಿಕೊಂಡಿರುತ್ತಾರೆ ಎಂದರೆ ನಾನು ಪೊಲಿಸರು ಠಾಣೆಗೆ ಹೋಗಿಲ್ಲ ದ್ವಾರದ ಬಳಿ ಬೈಕ ಇತ್ತು ಎನ್ನುತ್ತಾರೆ.

ಅದೇ ದಿವಸ ಮಹಮ್ಮದ ಮಸ್ತಫ್ ಆರೋಪಿಯನ್ನು ತಕ್ಷಿರು ನಡೆದ ಸ್ಥಳಕ್ಕೆ ಪೊಲಿಸರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನಾನು ಸಹ ಅವರ ಜೊತೆಯಲ್ಲಿ ಹೋಗಿರುತ್ತೆನೆ ಎಂದು ಸಾಕ್ಷಿ ನುಡಿಯುತ್ತಾರೆ. **1** ನೇ ಆರೋಪಿಯು ತಕ್ಷಿರು ನಡೆದ ಜಾಗವನ್ನು ತೋರಿಸಿ ಇದೇ ಜಾಗದಲ್ಲಿ ಚಾಸಾ**-1** ರವರ ಚಿನ್ನದ ಚೈನನ್ನು ಎಳೆದುಕೊಂಡು ಹೋಗಿದ್ದಾಗಿ ತೋರಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಪೊಲಿಸರು ನಿಪಿ**-4** ರಂತೆ ಮಹಜರನ್ನು ಬರೆದಿದ್ದು ಅದಕ್ಕೆ ಸದರಿ ಆರೋಪಿಯನ್ನು ನೋಡಿದರೆ ಸ್ಥಳದಲ್ಲಿ ನಾನು ಸಹಿ ಮಾಡಿರುತ್ತೆನೆ ಎಂದರೆ ಸರಿ. ಆರೋಪಿಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.